ಕರ್ನಾಟಕ ಸರ್ಕಾರ
Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3RD STAGE, BENGALURU - 560 085
Email: dpi.dsert.ka@nic.in  Website: http://dsert.kar.nic.in

Phone - 080 26980100
Fax 080 26422377

ಡಿಎಸ್‌ಇಆರ್‌ಟಿ
DSERT

ದಿನಾಂಕ:24-08-2022

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/ಮೌಲ್ಯಾಂಕನ/2022-23

## : ಜ್ಞಾಪ ನಾ :

ವಿಷಯ: 2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗಕ್ಕೆ ಅನುಗುಣವಾಗಿ ಲೆವೆಲ್-1 ಮತ್ತು ಲೆವೆಲ್-2 ಸಾಧನ ಬಳಸಿ ಮೌಲ್ಯಾಂಕನ ನಡೆಸುವ ಬಗ್ಗೆ.

ಉಲ್ಲೇಖ: 1. ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ ಹಾಗೂ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಕರವರ ಜ್ಞಾಪನಾ ಸಂ:ಡಿ.ಎಸ್.ಇ.ಆರ್.ಟಿ/ಇವಿಜಿ/ಕ.ಚೇ/ಮೌಲ್ಯಾಂಕನ/2021-22 ದಿನಾಂಕ:28.04.2022

2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಕರವರ ಸುತ್ತೋಲೆ ಸಂ: ಎಸ್.ಎಸ್.ಕೆ/ಗು.ಖಾ/ನಲಿ-ಕಲಿ/ಪಿ.ಎಂ.ಯು/2022-23 ದಿ:30-07-2022.

3. ದಿನಾಂಕ:12-08-2022ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಕೋರ್ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ.

** ** ** ** **

2020-21 ಹಾಗೂ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19ರ ಪರಿಣಾಮವಾಗಿ ಮಕ್ಕಳಿಗೆ ಕಲಿಕಾ ಕೊರತೆಯಾಗಿದ್ದು, ಸದರಿ ಕೊರತೆ ಸರಿದೂಗಿಸಿ ಕಲಿಸಲು ರಾಜ್ಯ ಸರ್ಕಾರ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಿ 2022-23ನೇ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ' ಎಂಬುದಾಗಿ ಘೋಷಿಸಲಾಗಿದೆ. ಕಲಿಕಾ ಚೇತರಿಕೆ ಉಪಕ್ರಮದ ಕಲಿಕಾ ಸಾಮಗ್ರಿಗಳಾದ ಕಲಿಕಾ ಹಾಳೆಗಳು ಮತ್ತು ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಿ ನೀಡಲಾಗಿದ್ದು, ಇದರೊಂದಿಗೆ ಶಿಕ್ಷಕರಿಗೆ ತರಬೇತಿಗಳನ್ನೂ ನೀಡಲಾಗಿದೆ. ಈ ಅವಧಿಯಲ್ಲಿ ನಿರ್ವಹಿಸಬೇಕಾದ ಶೈಕ್ಷಣಿಕ ಮೌಲ್ಯಾಂಕನ, ಮೌಲ್ಯಮಾಪನ ಕಾರ್ಯ ಚಟುವಟಿಕೆಗಳ ಬಗ್ಗೆ ಉಲ್ಲೇಖ-1ರ ಜ್ಞಾಪನದಲ್ಲಿ ವಿವರವಾದ ಮಾಹಿತಿಯನ್ನು ನೀಡಲಾಗಿದೆ.

ಮುಂದುವರೆದು ಉಲ್ಲೇಖ-2ರ ಸುತ್ತೋಲೆಯಲ್ಲಿ ನೀಡಿರುವ ಮಾಹಿತಿಯಂತೆ ಹಾಗೂ ಉಲ್ಲೇಖ-3ರ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಿದಂತೆ ಪ್ರಸಕ್ತ ಸಾಲಿನಲ್ಲಿ SA-1 ಮತ್ತು SA-2 ನಿರ್ವಹಿಸುವಾಗ, ಆಯಾ ತರಗತಿ ಮತ್ತು ವಿಷಯದ ಶೇ.50 LO (ಕಲಿಕಾ ಫಲ)ಗಳನ್ನು ಆಧರಿಸಿ ನಿರ್ವಹಿಸಬೇಕು. ವಿದ್ಯಾರ್ಥಿಗಳ ಕಲಿಕಾ ವೇಗಕ್ಕೆ ಅನುಗುಣವಾಗಿ ಲೆವಲ್-1 (ನಿಗದಿಗೊಳಿಸಿರುವುದಕ್ಕಿಂತ ಕಡಿಮೆ LO ಗಳನ್ನು ಸಾಧಿಸಿರುವ ವಿದ್ಯಾರ್ಥಿಗಳಿಗೆ) ಮತ್ತು ಲೆವಲ್-2 (ಎಲ್ಲಾ LO ಗಳನ್ನು ಸಾಧಿಸಿದ ವಿದ್ಯಾರ್ಥಿಗಳಿಗೆ) ಪ್ರತ್ಯೇಕ ಮೌಲ್ಯಾಂಕನ ಸಾಧನಗಳನ್ನು (Assessment Tools) ಬಳಸುವುದು. ಉದಾಹರಣೆಗೆ SA-1 ಕ್ಕೆ 8 LO ಗಳು ನಿಗದಿ ಆಗಿದ್ದಲ್ಲಿ ಲೆವಲ್-1 ಗಾಗಿ ತಯಾರಿಸಬೇಕಾದ ಮೌಲ್ಯಾಂಕನ ಸಾಧನದಲ್ಲಿ 4 LO ಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಲೆವಲ್-2 ಗಾಗಿ ಮೌಲ್ಯಾಂಕನ ಸಾಧನೆಯನ್ನು

Scanned with CamScanner

ತಯಾರಿಸುವಾಗ ಎಲ್ಲಾ 8 LO ಗಳನ್ನು ಪರಿಗಣಿಸುವುದು. ಯಾವ ವಿದ್ಯಾರ್ಥಿಗೆ ಯಾವ ಮೌಲ್ಯಾಂಕನ ಸಾಧನ ಅಂದರೆ ಲೆವಲ್-1 ಅಥವಾ ಲೆವಲ್-2 ಮೌಲ್ಯಾಂಕನ ಸಾಧನವೇ ಎಂಬುದನ್ನು ಆಯಾ ವಿಷಯ ಶಿಕ್ಷಕರು, ವಿದ್ಯಾರ್ಥಿಗಳು ಸಾಧಿಸಿದ ಕಲಿಕಾ ಫಲಗಳ ಆಧಾರದ ಮೇಲೆ ನಿರ್ಧರಿಸಿ ಮೌಲ್ಯಾಂಕನ ನಡೆಸುವುದು. ಅದನ್ನು ಆಧರಿಸಿ ಗ್ರೇಡ್‌ಗಳನ್ನು ನಮೂದಿಸಿ ಪೋಷಕರೊಂದಿಗೆ ಹಂಚಿಕೊಳ್ಳಬೇಕು. ಸದರಿ ಮೌಲ್ಯಾಂಕನ ಮಾಹಿತಿಯನ್ನು ವಿದ್ಯಾರ್ಥಿ ಕೃತಿ ಸಂಪುಟದಲ್ಲಿ ದಾಖಲಿಸಿ ಪೋಷಕರ ಸಭೆಯಲ್ಲಿ, ಸಮುದಾಯದತ್ತ ಕಾರ್ಯಕ್ರಮಗಳಲ್ಲಿ ಹಿಮ್ಮಾಹಿತಿ ಒದಗಿಸಲು ತಿಳಿಸಿದೆ. ಈ ಮೂಲಕ ಪ್ರತೀ ವಿದ್ಯಾರ್ಥಿಯನ್ನು ಪ್ರೋತ್ಸಾಹಿಸಿ ಆಯಾ ತರಗತಿಗೆ ಅನುಗುಣವಾಗಿ ಸಾಧಿಸಬೇಕಾದ ಕಲಿಕಾ ಫಲಗಳನ್ನು ಸಾಧಿಸುವಂತೆ ಕ್ರಮವಹಿಸುವುದು.

೨೦.೨೦.೭೨೦

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.

ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ)ರವರ ಮುಖಾಂತರ
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

Scanned with CamScanner